ಬೆವಿಕಂ
BESCOM

# ಬೆಸ್ಕಾಂ ಸ್ನೇಹಿ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಗೃಹಪತ್ರಿಕೆ

ಸಂಪುಟ-4, ಸಂಚಿಕೆ-1 | ತ್ರೈಮಾಸಿಕ, ಜನವರಿ–ಮಾರ್ಚ್ 2017 | ಪುಟಗಳು-12



# ಬರಪೀಡಿತ ಪ್ರದೇಶಗಳಿಗೆ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಇಂಧನ ಸಚಿವರು ಭೇಟಿ ನೀಡಿದ ಚಿತ್ರಗಳು





ಬೆಂಗಳೂರು ಗ್ರಾಮಾಂತ್ರರ ಕ್ಷೇತ್ರ, ರಾಮನಗರ ಜಿಲ್ಲಾ ವ್ಯಾಪ್ತಿಯ ಬರಪೀಡಿತ ಪ್ರದೇಶಗಳಾದ ಮಾಯಗಾನನಹಳ್ಳಿ, ಬಿಜ್ಜರಹಳ್ಳಿ ಕಟ್ಟೆ, ಸುಗ್ಗನಹಳ್ಳಿ, ಪಾದರಹಳ್ಳಿಗಳಿಗೆ ದಿನಾಂಕ 16–11–2016ರಂದು ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಇಂಧನ ಸಚಿವರು, ಕರ್ನಾಟಕ ಸರ್ಕಾರ ಹಾಗೂ ಮಾನ್ಯ ಸಂಸದರು ಭೇಟಿ ನೀಡಿ ಬರ ಸಮೀಕ್ಷೆ ನಡೆಸಿದರು.

# ಮಾನ್ಯ ಇಂಧನ ಸಚಿವರಿಂದ ಕಬ್ಬಾಳು ಕಾರ್ಯ ಮತ್ತು ಪಾಲನಾ ಘಟಕ ಕಚೇರಿ ಹಾಗೂ ಹೆಚ್‌ವಿಡಿಎಸ್ ಉದ್ಘಾಟನೆ







30.08.2016ರಂದು ನಡೆದ ಕೋಡಿಹಳ್ಳಿ ಉಪವಿಭಾಗಕ್ಕೆ ಒಳಪಡುವ ಕಬ್ಬಾಳು ಕಾರ್ಯ ಮತ್ತು ಪಾಲನಾ ಘಟಕ ಕಚೇರಿ ಹಾಗೂ ಹೆಚ್‌ವಿಡಿಎಸ್ ಫೀಡರ್‌ಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಇಂಧನ ಇಲಾಖೆ ಸಚಿವ ಶ್ರೀಯುತ ಡಿ.ಕೆ. ಶಿವಕುಮಾರ್ ಮತ್ತು ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಸಂಸದ ಶ್ರೀಯುತ ಡಿ.ಕೆ. ಸುರೇಶ್ ಪಾಲ್ಗೊಂಡಿದ್ದರು.

# Message from Managing Director



**P. Rajendra Cholan**
Managing Director

It gives me immense pleasure to share the news about BESCOM bagging 2nd Price at National Energy Conservation Award-2016 ceremony organised by Ministry of Power on 14.12.2016 and I dedicate this award to all our officers and staff who are working towards achieving our vision of being leader in energy conservation and Customer Satisfaction. BESCOM has received this honour for the best practises adopted in Demand Side Management, Solar Initiatives and Energy Conservation.

I firmly standby our commitment of providing uninterrupted power supply to all our consumers and advise our field staff to work hard towards carrying out preventive maintenance and build a strong electrical network. To match the required demand we have boldly taken up decision of procuring power over Open Access through power exchange on need basis and we have also implemented effective load management to ensure optimal use of power in the Grid.

Further, I strongly believe that enabling IT in the administration has always resulted in transparency and increased performance. Hence, we have also taken up initiatives to deploy the Consumer centric applications for ease of reaching BESCOM. The times of one-way communication from Grid to consumers are changing and Smart Grid technology is buzzing around in Power Sector. We at BESCOM have already built a Road Map for implementing Smart Grid Projects and near future many Smart Grid projects will be implemented for giving best services to our consumers.

I believe the proper Energy Auditing is a key insight to achieve energy efficiency and conservation that can lead to significant savings of energy which helps the utility for effective Power Management. We are also working out towards implementing 100% Energy audit by using an online web enabled application. The approach of linking the losses with the Revenue Parameters will help us not only to analyse losses but also to improve the financial position of our utility.

At last I would like to wish all our stake holders a Happy New Year. Hoping this new year to bring about more positive vibes into our system and we all work for the betterment of our Company.

# ಹಣಕಾಸು ನಿರ್ದೇಶಕರ ಸಂದೇಶ



**ಡಾ|| ಆರ್.ಸಿ. ಚೇತನ್**
ನಿರ್ದೇಶಕರು (ಹಣಕಾಸು)

ಗ್ರಾಹಕರ ಹಿತರಕ್ಷಣೆಗಾಗಿ ನಿಗಮವು ಗ್ರಾಹಕ ಸ್ನೇಹಿ ಸಂಬಂಧಿತ ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿರುತ್ತದೆ. ಗ್ರಾಹಕ ಸ್ನೇಹಿ ಜೊತೆ ಜೊತೆಗೆ ಸಂಸ್ಥೆಯ ಅಧಿಕಾರಿ/ಸಿಬ್ಬಂದಿಗಳ ಹಿತ ಕಾಯುವ ಹಾಗು ನಿಮ್ಮಗಳ ಕಾರ್ಯ ನಿರ್ವಹಣೆಯನ್ನು ಸುಲಲಿತಗೊಳಿಸುವ ನಿಟ್ಟಿನಲ್ಲಿ ಸಹಾಯಹಸ್ತ ರೂಪಿಸುವ ಉದ್ದೇಶವು ಮತ್ತು ಹೊಣೆಗಾರಿಕೆಯು ನಿಗಮದ್ದಾಗಿರುತ್ತದೆ.

ದೈನಂದಿನ ಕಾರ್ಯನಿರ್ವಹಣೆಯನ್ನು ಹಗುರಗೊಳಿಸಿ ಸಿಬ್ಬಂದಿ ವರ್ಗದ ಅತ್ಯಮೂಲ್ಯ ಸಮಯ ಮತ್ತು ಬುದ್ಧಿ ಶಕ್ತಿಯನ್ನು ನಿಗಮ ಹಾಗು ಗ್ರಾಹಕರ ಸೇವೆಗೆ ತೊಡಗಿಸಿಕೊಳ್ಳುವ ಧ್ಯೇಯೋದ್ದೇಶದಿಂದ ಪ್ರಸ್ತುತ ಚಾಲ್ತಿಯಲ್ಲಿರುವ ವಿವಿಧ ವಸೂಲಾತಿ ಮಾಧ್ಯಮಗಳೊಂದಿಗೆ ಮತ್ತೊಂದು ಆನ್-ಲೈನ್ ವಸೂಲಾತಿ ಮಾಧ್ಯಮವು ಅತಿ ಶೀಘ್ರದಲ್ಲಿ ಜಾರಿಗೊಳ್ಳಲಿದೆ ಎಂಬುದನ್ನು ತಿಳಿಸಲು ಹರ್ಷಿಸುತ್ತೇನೆ.

ತಮಗೆಲ್ಲ ತಿಳಿದಂತೆ ಘನ ಕೇಂದ್ರ ಸರ್ಕಾರದ ಅತ್ಯಂತ ಮಹತ್ವಪೂರ್ಣ ನಿರ್ಧಾರ "ಹಳೆಯ ಉನ್ನತ ಮೌಲ್ಯದ ರೂ 500/- ಮತ್ತು ರೂ 1000/- ನೋಟುಗಳ ಚಲಾವಣೆ ರದ್ದತಿ" ಯೋಜನೆಯಲ್ಲಿ ಗ್ರಾಹಕರಿಗೆ ಬಿಲ್ಲು ಪಾವತಿಸಲು ಸಮಸ್ಯೆಯುಂಟಾಗದಂತೆ ಹಾಗೂ ನಿಗಮದ ದೈನಂದಿನ ಹಣಕಾಸು ವಹಿವಾಟು ಸಮತೋಲನವನ್ನು ಕಾಯ್ದುಕೊಳ್ಳುವಲ್ಲಿ ಹಗಲು ರಾತ್ರಿಯೆನ್ನದೆ ಕರ್ತವ್ಯ ನಿರ್ವಹಿಸಿದ ನಮ್ಮ ನೆಚ್ಚಿನ ಸಿಬ್ಬಂದಿಗಳ ಸಹಭಾಗಿತ್ವ ಮತ್ತು ನೀಡಿದ ಸಹಕಾರವನ್ನು ತುಂಬು ಹೃದಯದಿಂದ ಶ್ಲಾಘಿಸಬಯಸುತ್ತೇನೆ.

ಮುಂದುವರೆದು ಸನ್ಮಾನ್ಯ ಗ್ರಾಹಕರೊಂದಿಗೆ ಸೌಹಾರ್ದತಯುತ ಸಂಬಂಧವನ್ನು ಕಾಯುಕೊಳ್ಳುವ ಹೊಣೆ ನಮ್ಮನಿಮ್ಮೆಲ್ಲರದಾಗಿರುತ್ತದೆ. ದೈನಂದಿನ ಕಾರ್ಯಚಟುವಟಿಕೆಯ ಗ್ರಾಹಕರೊಂದಿಗಿನ ಒಡನಾಟದಲ್ಲಿ ಸಹೃದಯ-ಸೌಹಾರ್ದಯುತ ಭಾವವು ಸಹಜವಾಗಿ ಸಮ್ಮಿಳಿತವಾಗಲಿ ಎಂದು ಆಶಿಸುತ್ತೇನೆ.



**ಕೆ.ಸಿದ್ದರಾಜು**
ನಿರ್ದೇಶಕರು
(ತಾಂತ್ರಿಕ)

# ತಾಂತ್ರಿಕ ನಿರ್ದೇಶಕರ ಸಂದೇಶ

ಕೆ. ಸಿದ್ದರಾಜು ಆದ ನಾನು ದಿನಾಂಕ 03-12-2016 ರಂದು ಬೆವಿಕಂ ಸಂಸ್ಥೆಯಲ್ಲಿ ನಿರ್ದೇಶಕರು (ತಾಂತ್ರಿಕ) ನಾಗಿ ಕಾರ್ಯಭಾರ ವಹಿಸಿಕೊಂಡಿರುತ್ತೇನೆ.

ಪ್ರಪ್ರಥಮವಾಗಿ ನಮ್ಮ ನೆಚ್ಚಿನ ಅಧಿಕಾರಿ/ನೌಕರರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಎಲ್ಲರಿಗೂ 2017 ಹೊಸ ವರ್ಷದ ಶುಭಾಶಯಗಳು. ಸಂಸ್ಥೆಯ ಏಳಿಗೆಗಾಗಿ ದುಡಿಯೋಣ. ಸಂಸ್ಥೆ ಪ್ರಗತಿ ಸಾಧಿಸಲು ಅಧಿಕಾರಿಗಳು ಹಾಗೂ ನೌಕರರು ಸಹಕರಿಸಬೇಕು. ಅಧಿಕಾರಿ/ನೌಕರರಿಗೆ ವಹಿಸಲಾದ ಕರ್ತವ್ಯವನ್ನು ಪೂರ್ಣ ಪ್ರಮಾಣದಲ್ಲಿ ಅತ್ಯಂತ ನಿಷ್ಠೆ ಮತ್ತು ಶ್ರದ್ಧೆಯಿಂದ ಕ್ರಿಯಾತ್ಮಕವಾಗಿ ನಿರ್ವಹಿಸಿ ವಿದ್ಯುತ್ ಸರಬರಾಜಿನಲ್ಲಿ ನಷ್ಟವನ್ನು ಕಡಿಮೆಗೊಳಿಸುವ ಮತ್ತು ಗ್ರಾಹಕರಿಗೆ ಗುಣಮಟ್ಟದ ಸೇವೆಯನ್ನು ನೀಡಲು ಕೋರುತ್ತೇನೆ.

ವಿದ್ಯುತ್ ಜಾಲದ ವಿತರಣಾ ವ್ಯವಸ್ಥೆಯಲ್ಲಿ ಗ್ರಾಹಕರಿಗೆ ಸಮರ್ಪಕವಾಗಿ ವಿದ್ಯುತ್ ಸರಬರಾಜು ಮಾಡಲು ಕಾರ್ಯನಿರ್ವಹಿಸಲು ಒತ್ತು ಕೊಡಲಾಗುವುದು. ಕಳೆದ ಎರಡು ವರ್ಷಗಳಿಂದ ಕರ್ನಾಟಕದಾದ್ಯಂತ ಮಳೆ ಕೊರತೆಯಾಗಿ ಜಲಾಶಯಗಳು ಭರ್ತಿಯಾಗದೆ ಜಲ ವಿದ್ಯುತ್ ಸ್ಥಾವರಗಳಿಂದ ಉತ್ಪಾದನೆ ಕಡಿಮೆಯಾಗಿರುವುದು ತಿಳಿದಿದೆ. ಇಂತಹ ಸಂದರ್ಭಗಳಲ್ಲಿ ಲಭ್ಯವಿರುವ ವಿದ್ಯುತ್ ಅನ್ನು ಸಮರ್ಪಕವಾಗಿ ಉಪಯೋಗಿಸುವ ಕಾರ್ಯ ನಮ್ಮ ಮೇಲೆ ಇದೆ. ಇದನ್ನು ಸರಿಯಾಗಿ ನಿಭಾಯಿಸುವ ಭರವಸೆ ಇದ್ದು ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಳ್ಳುವಂತೆ ಕೋರುತ್ತೇನೆ.

ತಮಗೆಲ್ಲರಿಗೂ ಮತ್ತೊಮ್ಮೆ ಹೊಸ ವರ್ಷದ 2017 ಶುಭಾಶಯಗಳು.

# ಸಂಪಾದಕೀಯ...



ಆತ್ಮೀಯರೇ,

ನಿಮ್ಮ "ಬೆಸ್ಕಾಂ ಸ್ನೇಹಿ" ತ್ರೈಮಾಸಿಕ ಈಗ ಮೂರನೇ ವರ್ಷಕ್ಕೆ ಕಾಲಿಡುತ್ತಿದೆ. ಪತ್ರಿಕೆಯನ್ನು ಮತ್ತೆ ಆರಂಭಿಸುವಾಗ ನಮ್ಮ ಸಿಬ್ಬಂದಿ ಹಾಗು ಅಧಿಕಾರಿಗಳು ಸಾಕಷ್ಟು ಒಳ್ಳೆಯ ಲೇಖನ/ಅನಿಸಿಕೆಗಳನ್ನು ನೀಡುತ್ತಾರೆಂದು ನಿರೀಕ್ಷಿಸಿದ್ದೆವು. ಪತ್ರಿಕೆಯನ್ನು ಓದುವುದರಲ್ಲಿ ಹೆಚ್ಚಿನವರಿಗೆ ಆಸಕ್ತಿಯೇ ಹೊರತು ಅದಕ್ಕೆ ಲೇಖನಗಳನ್ನು ಬರೆದು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸುವುದರಲ್ಲಿ ಇನ್ನೂ ನಿರೀಕ್ಷಿತ ಮಟ್ಟ ತಲುಪಿಲ್ಲ. ಮುಂದಿನ ದಿನಗಳಲ್ಲಿಯಾದರೂ, ಸಿಬ್ಬಂದಿ ಹಾಗು ಅಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ತಮ್ಮ ಕವನಗಳು/ಬರಹಗಳು/ಅಗತ್ಯ ಮಾಹಿತಿಗಳನ್ನು ನೀಡುತ್ತಾರೆಂಬ ನಿರೀಕ್ಷೆ ನಮ್ಮದು. ನಮ್ಮ ಸಿಬ್ಬಂದಿ, ಅಧಿಕಾರಿಗಳ ವರ್ಗದಲ್ಲಿ ಪ್ರತಿಭೆ ಹಾಗೂ ಉತ್ಸಾಹಕ್ಕೆ ಕೊರತೆ ಇಲ್ಲ. ಆದರೆ ಅವರು ಮನಸ್ಸು ಮಾಡಬೇಕಿದೆ ಅಷ್ಟೇ.

2016 ರಾಜ್ಯದ ಪಾಲಿಕೆ ಉತ್ತಮ ಕಾಲವಾಗಿರಲಿಲ್ಲ. ಮಳೆಯ ಅಭಾವದ ಪರಿಣಾಮವಾಗಿ ವಿದ್ಯುತ್ ಕೊರತೆ ಜೊತೆಗೆ ಬಹಳಷ್ಟು ಜಿಲ್ಲೆಗಳಲ್ಲಿ ಬರದ ಪರಿಸ್ಥಿತಿಯನ್ನು ಎದುರಿಸಬೇಕಾಯಿತು.

ಇಂತಹ ಸಂದರ್ಭದಲ್ಲಿ ವಿದ್ಯುತ್ ವಿತರಣೆಯನ್ನು ಸರಿದೂಗಿಸುವುದೇ ಒಂದು ಸವಾಲಾಗಿ ಪರಿಣಮಿಸಿತು. ನಮ್ಮ ಇಲಾಖೆ ಸಚಿವ ಶ್ರೀಯುತ ಡಿ.ಕೆ. ಶಿವಕುಮಾರ್ ಹಾಗೂ ಎಲ್ಲಾ ಅಧಿಕಾರಿ/ಸಿಬ್ಬಂದಿ ವರ್ಗದವರ ಪರಿಶ್ರಮದ ಫಲವಾಗಿ ಗ್ರಾಹಕರಿಗೆ ಸಮರ್ಪಕ ವಿದ್ಯುತ್ ಪೂರೈಕೆ ಸಾಧ್ಯವಾಯಿತು.

ವರ್ಷದಿಂದ ವರ್ಷಕ್ಕೆ ನಾವು ಪ್ರಗತಿಯನ್ನು ಎಲ್ಲಾ ವಿಭಾಗಗಳಲ್ಲೂ ಸಾಧಿಸಬೇಕು. ಆಗ ಮಾತ್ರ ನಮ್ಮ ಅಸ್ತಿತ್ವಕ್ಕೆ ಒಂದು ಅರ್ಥ ಬರುತ್ತದೆ. ಈ ವಿಚಾರದಲ್ಲಿ ಎಲ್ಲರೂ ದೃಢಸಂಕಲ್ಪದೊಂದಿಗೆ ಕಾರ್ಯ ನಿರ್ವಹಿಸಿ ಸಂಸ್ಥೆಯ ಪ್ರಗತಿ ಸಾಧಿಸಲು ತಮ್ಮ ಕೊಡುಗೆಯನ್ನು ನೀಡಬೇಕೆನ್ನುವುದು ನನ್ನ ಮನವಿ.


ವಿದ್ಯುತ್ ವಿತರಣೆಗೆ ಪೂರಕವಾಗಿರುವ ಕಾರ್ಯ ಮತ್ತು ಪಾಲನಾ ಚಟುವಟಿಕೆಗಳು ಇನ್ನಷ್ಟು ಚುರುಕಾಗಬೇಕು. ನಮ್ಮೆಲ್ಲ ಸಿಬ್ಬಂದಿ, ಅಧಿಕಾರಿಗಳು ಈ ಸಂಬಂಧ ಕ್ರಿಯಾತ್ಮಕವಾಗಿ ಹಾಗೂ ಸಂಘಟನೆಯಿಂದ ಕಾರ್ಯ ನಿರ್ವಹಿಸಬೇಕು. ಆಗ ನಿರೀಕ್ಷಿತ ಫಲಿತಾಂಶ ಖಂಡಿತಾ ದೊರಕುತ್ತದೆ ಎಂಬ ವಿಶ್ವಾಸ ನನಗಿದೆ.

ಈ ನಿಟ್ಟಿನಲ್ಲಿ ನಾವೆಲ್ಲರೂ ಇನ್ನಷ್ಟು ಕ್ರಿಯಾತ್ಮಕವಾಗಿ ಕಾರ್ಯ ನಿರ್ವಹಿಸಿ ಸಂಸ್ಥೆಯ ಹಾಗೂ ಗ್ರಾಹಕರ ಪ್ರೀತಿ, ವಿಶ್ವಾಸಗಳಿಗೆ ಪಾತ್ರರಾಗೋಣ. ಮುಂದಿನ ದಿನಗಳಲ್ಲಿ ನಿಮ್ಮೆಲ್ಲರಿಂದ ಇನ್ನೂ ಹೆಚ್ಚಿನ ಸಹಕಾರದ ನಿರೀಕ್ಷೆಯಲ್ಲಿ 'ಬೆಸ್ಕಾಂ ಸ್ನೇಹಿ' ಮುಂದುವರಿಯಲಿದೆ.

ಎಲ್ಲರಿಗೂ ಹೊಸ ವರ್ಷದ ಹಾಗೂ ಸಂಕ್ರಾಂತಿಯ ಹಾರ್ದಿಕ ಶುಭಾಶಯಗಳು.

ಸಂಪಾದಕಿ
**ಎನ್. ಜಯಂತಿ**
ಪ್ರಧಾನ ವ್ಯವಸ್ಥಾಪಕರು (ಗ್ರಾ.ಸಂ.), ಬೆಸ್ಕಾಂ

# ನಮ್ಮ ಊರು, ನಮ್ಮ ಜಿಲ್ಲೆ – ಚಿತ್ರದುರ್ಗ



ಬೆಂಗಳೂರು ನಗರದ ವಾಯವ್ಯ ದಿಕ್ಕಿಗೆ ಸುಮಾರು 202 ಕಿ.ಮೀ ದೂರದಲ್ಲಿರುವ ಚಿತ್ರದುರ್ಗ ಶೌರ್ಯ ಮತ್ತು ಚಾಣಾಕ್ಷತೆಗೆ ಹೆಸರಾದ ಜಿಲ್ಲೆ.

ಇತಿಹಾಸದ ಪ್ರಕಾರ ಈ ಜಿಲ್ಲೆ ಮೌರ್ಯರು, ರಾಷ್ಟ್ರಕೂಟರು, ಚಾಲುಕ್ಯರು ಮತ್ತು ಹೊಯ್ಸಳರ ಆಡಳಿತಕ್ಕೆ ಒಳಪಟ್ಟಿತ್ತು. ನಂತರ ವಿಜಯನಗರ ಸಾಮ್ರಾಟರ ಕಾಲದಲ್ಲಿ ಪಾಳೇಗಾರರು ಎಂದು ಹೆಸರಾದ ನಾಯಕರ ಆಡಳಿತ ಸ್ಥಾಪನೆಯಾಯಿತು. ಅವರಲ್ಲಿ ಪ್ರಮುಖ ಮದಕರಿನಾಯಕ. ಆತನ ಕಾಲದಲ್ಲಿ ಚಿತ್ರದುರ್ಗದ ಕಲ್ಲಿನ ಕೋಟೆ ನಿರ್ಮಾಣವಾಯಿತು. ನಂತರ 1779 ರಲ್ಲಿ ಹೈದರ್ ಅಲಿ ಹಾಗೂ ಆತನ ಪುತ್ರ ಟಿಪ್ಪು ಸುಲ್ತಾನರು ಈ ಕೋಟೆಯನ್ನು ವಶಕ್ಕೆ ಪಡೆದು ಆಡಳಿತ ನಡೆಸಿದರು.

ಬ್ರಿಟಿಷರು ಟಿಪ್ಪು ಸುಲ್ತಾನನನ್ನು ಸೋಲಿಸಿ ಕೋಟೆಯನ್ನು ವಶಪಡಿಸಿಕೊಂಡ ನಂತರ ಮೈಸೂರು ರಾಜರ ಆಡಳಿತ ಇಲ್ಲಿ ಸ್ಥಾಪನೆಯಾಯಿತು.

ಚಿತ್ರದುರ್ಗ ಜಿಲ್ಲೆಯನ್ನು ವಿಭಜಿಸಿ ಕೆಲವು ತಾಲ್ಲೂಕುಗಳನ್ನು ದಾವಣಗೆರೆ ಜಿಲ್ಲೆಗೆ ಸೇರಿಸಲಾಯಿತು. ಈಗ ಚಿತ್ರದುರ್ಗ ಜಿಲ್ಲೆಯಲ್ಲಿ ಒಟ್ಟು ಆರು ತಾಲ್ಲೂಕುಗಳಿವೆ. ಚಿತ್ರದುರ್ಗ, ಹೊಳಲ್ಕೆರೆ, ಹೊಸದುರ್ಗ, ಹಿರಿಯೂರು, ಚಳ್ಳಕೆರೆ ಹಾಗೂ ಮೊಳಕಾಲ್ಮೂರು. ಈಗ ಜಿಲ್ಲೆಯ ಜನಸಂಖ್ಯೆ ಸುಮಾರು 5 ಲಕ್ಷ.

ಜಿಲ್ಲೆಯ ಪ್ರಮುಖ ಪ್ರವಾಸಿ ತಾಣಗಳು : ಚಿತ್ರದುರ್ಗದಲ್ಲಿರುವ ಕಲ್ಲಿನ ಕೋಟೆ ಹಾಗೂ ಮುರುಘರಾಜೇಂದ್ರ ಶ್ರೀಗಳ ಬೃಹನ್ಮಠ.

ಬೃಹನ್ಮಠ ಪಾಳೇಗಾರರ ಕಾಲದಲ್ಲೇ ವಿಶಾಲವಾದ ಜಾಗಕ್ಕೆ ಸ್ಥಳಾಂತರಗೊಂಡು ಸುಧಾರಣೆಯನ್ನು ಕಂಡಿತು. ಈಗ ಶಿವಮೂರ್ತಿ ಶರಣರ ನೇತೃತ್ವದಲ್ಲಿ ಪ್ರಖ್ಯಾತಿಯನ್ನು ಪಡೆದು ಮುನ್ನಡೆಯುತ್ತಿದೆ.

ಹಿರಿಯೂರು ತಾಲ್ಲೂಕಿನಲ್ಲಿ ವೇದಾವತಿ ನದಿಗೆ ಅಡ್ಡಲಾಗಿ ನಿರ್ಮಿಸಿರುವ ವಾಣಿವಿಲಾಸ ಸಾಗರ ಆಣೆಕಟ್ಟೆ, ಚಳ್ಳಕೆರೆ ತಾಲ್ಲೂಕಿನ ನಾಯಕನ ಹಟ್ಟಿಯ ತಿಪ್ಪೇರುದ್ರಸ್ವಾಮಿ ದೇವಸ್ಥಾನ, ಹೊಸದುರ್ಗ ತಾಲ್ಲೂಕಿನ ಸಾಣೆಹಳ್ಳಿಯ ಸಿ.ಜಿ.ಕೆ. ರಂಗಮಂದಿರ, ಅಶೋಕನ ಕಾಲದ್ದೆನ್ನಲಾದ ಮೊಳಕಾಲ್ಮೂರು ಸಮೀಪದ ಸಿದ್ದಾಪುರ ಶಾಸನ, ಮಲ್ಲಾಡಿಹಳ್ಳಿಯ ಆಶ್ರಮ, ಪ್ರವಾಸಿಗರ ತಾಣಗಳಲ್ಲಿ ಪ್ರಮುಖವಾದವು. ಮೊಳಕಾಲ್ಮೂರು ನೇಯ್ಗೆ ಸೀರೆಗಳಿಗೂ ಹೆಸರುವಾಸಿಯಾಗಿದೆ.

ಚಿತ್ರದುರ್ಗ ನಗರಕ್ಕೆ ಸಮೀಪವಿರುವ ಜೋಗಿಮಟ್ಟಿ ಅರಣ್ಯಧಾಮ, ಮೃಗಾಲಯ ಹಾಗೂ ಬೆಟ್ಟಗಳೂ ಪ್ರವಾಸಿಗರನ್ನು ಆಕರ್ಷಿಸುತ್ತಿವೆ.

ಚಿತ್ರದುರ್ಗ ನಗರವು ಇಲ್ಲಿರುವ ಛತ್ರಿ ಆಕಾರದ ಚಿತ್ರಕಲ್ಲು ದುರ್ಗದಿಂದ ತನ್ನ ಹೆಸರನ್ನು ಪಡೆದುಕೊಂಡಿದೆ. 2011ರ ಜನಗಣತಿಯ ಪ್ರಕಾರ ಚಿತ್ರದುರ್ಗ ನಗರದ ಜನಸಂಖ್ಯೆ 1,25,170. ಇವರಲ್ಲಿ ಪುರುಷರು ಸುಮಾರು 51% ರಷ್ಟು ಇದ್ದರೆ, ಮಹಿಳೆಯರು ಸುಮಾರು 49% ರಷ್ಟು ಇದ್ದಾರೆ. ಚಿತ್ರದುರ್ಗದ ಸರಾಸರಿ ಸಾಕ್ಷರತಾ ಪ್ರಮಾಣ 79%, ರಾಷ್ಟ್ರೀಯ ಸರಾಸರಿಗಿಂತ(59.5%) ಹೆಚ್ಚಾಗಿದೆ. ಪುರುಷರ ಸಾಕ್ಷರತಾ ಪ್ರಮಾಣ 80% ಮತ್ತು ಮಹಿಳೆಯರ ಸಾಕ್ಷರತಾ ಪ್ರಮಾಣ 72%.

ಒನಕೆ ಓಬವ್ವಳ ಸಾಹಸಗಾಥೆ ಕನ್ನಡ ನಾಡಿನ ಶೌರ್ಯಗಾಥೆಗಳಲ್ಲಿ ಒಂದಾಗಿ ಜನಜನಿತವಾಗಿದೆ. ಮದಕರಿ ನಾಯಕನ ಆಳ್ವಿಕೆಯ ಕಾಲದಲ್ಲಿ, ಹೈದರ್–ಆಲಿಯ ಸೈನ್ಯವು ಕೋಟೆಯನ್ನು ಸುತ್ತುವರೆದಿತ್ತು. ಒಬ್ಬ ಮಹಿಳೆ ಕೋಟೆಯ ಕಿಂಡಿಯಿಂದ ಒಳ ಹೋಗುವುದನ್ನು ಕಂಡ ಹೈದರ–ಆಲಿಯು ತನ್ನ ಸೈನ್ಯವನ್ನು ಆ ಕಿಂಡಿಯ ಮೂಲಕ ಒಳಗೆ ಕಳುಹಿಸಿ ಕೋಟೆಯನ್ನು ವಶಪಡಿಸಿಕೊಳ್ಳಲು ಸಂಚು ಹೂಡುತ್ತಾನೆ. ಕೋಟೆಯ ಆ ಭಾಗದ ಕಾವಲುಗಾರನ ಹೆಂಡತಿಯೇ ಓಬವ್ವ. ಒಮ್ಮೆ ಅವಳು ಗಂಡನನ್ನು ಊಟಕ್ಕೆ ಕೂರಿಸಿ, ನೀರನ್ನು ತರಲು ಹೋಗಿದ್ದ ಸಂದರ್ಭದಲ್ಲಿ, ಹೈದರ–ಅಲಿಯ ಸೈನಿಕರು ಕಿಂಡಿಯ ಮೂಲಕ ನುಸುಳುವುದನ್ನು ಕಾಣುತ್ತಾಳೆ. ಎದೆಗುಂದದೆ ಕೈಯಲ್ಲಿದ್ದ ಒನಕೆಯಿಂದಲೇ ಒಳಗೆ ನುಗ್ಗುತ್ತಿರುವ ಒಬ್ಬೊಬ್ಬ ಸೈನಿಕರನ್ನು ಬಡಿದು ಕೊಲ್ಲುತ್ತಾಳೆ. ಸತ್ತವರನ್ನು ಸಂಶಯ ಬಾರದ ಹಾಗೆ ದೂರ ಎಳೆದು ಹಾಕುತ್ತಾಳೆ. ಅತ್ತ ಊಟ ಮುಗಿಸಿದ ಕಾವಲುಗಾರ ತುಂಬಾ ಹೊತ್ತಿನವರೆಗೂ ಹೆಂಡತಿಗಾಗಿ ಕಾಯ್ದು ಹುಡುಕುತ್ತಾ ಬರುತ್ತಾನೆ. ಅಲ್ಲಿ ರಕ್ತಸಿಕ್ತವಾದ ಒನಕೆಯನ್ನು ಕೈಯಲ್ಲಿ ಹಿಡಿದು ರಣಚಂಡಿಯ ಅವತಾರದಲ್ಲಿರುವ ಓಬವ್ವನನ್ನು ಸತ್ತು ಬಿದ್ದಿರುವ ನೂರಾರು ಹೈದರ–ಅಲಿಯ ಸೈನಿಕರನ್ನು ನೋಡಿ ಆಶ್ಚರ್ಯಚಕಿತನಾಗುತ್ತಾನೆ. ಕೂಡಲೆ ಕಹಳೆ ಊದಿ ತನ್ನ ಸೇನೆಯನ್ನು ಎಚ್ಚರಗೊಳಿಸುತ್ತಾನೆ ಹಾಗೂ ನಾಯಕನ ಸೇನೆಯು ಕೋಟೆಯನ್ನು ಹೈದರ–ಆಲಿಯ ವಶಕ್ಕೆ ಹೋಗುವುದನ್ನು ತಪ್ಪಿಸುತ್ತದೆ. ಓಬವ್ವನ ಸಮಯೋಚಿತ ಯುಕ್ತಿ ಮತ್ತು ಧೈರ್ಯವನ್ನು ಈಗಲೂ ಜನ ನೆನೆಯುತ್ತಾರೆ. ಈ ಘಟನೆಗೆ ಸಾಕ್ಷಿಯಾಗಿ ಈಗಲೂ ಆ ಕಿಂಡಿಯನ್ನು ಏಳು ಸುತ್ತಿನ ಕೋಟೆಯಲ್ಲಿ ಕಾಣಬಹುದು. ಅದು ಚಿತ್ರದುರ್ಗದ ಪ್ರವಾಸಿ ತಾಣಗಳಲ್ಲಿ ಒಂದಾಗಿದೆ.

# ಮರೆಯಾಗುತ್ತಿರುವ ಆಟಗಳು–ಗಿಲ್ಲಿ ದಾಂಡು ಅಥವಾ ಚಿನ್ನಿ ದಾಂಡು



ಈ ಆಟವೂ ಕೂಡ ಹೆಚ್ಚಾಗಿ ಗ್ರಾಮೀಣ ಪ್ರದೇಶಗಳಲ್ಲಿ ಹಾಗೂ ಪಟ್ಟಣ ಪ್ರದೇಶಗಳಲ್ಲೂ ಆಡುವ ಆಟವಾಗಿದ್ದು, ಇದು ಹಲವಾರು ಭಾಷೆಗಳಲ್ಲಿ ಕರೆಯಲ್ಪಡುತ್ತದೆ. ಇಂಗ್ಲಿಷ್‌ನಲ್ಲಿ ಟಿಪ್‌ಕ್ಯಾಟ್, ಮಲಯಾಳ ಭಾಷೆಯಲ್ಲಿ ಕುಟ್ಟಿಯುಂ ಕೊಲುಮ್, ಪಂಜಾಬಿ ಭಾಷೆಯಲ್ಲಿ ಗುಲ್ಲಿ–ದಾಂಡ, ತೆಲುಗಿನಲ್ಲಿ ಬಿಲ್ಲಮ್–ಗೋಡು, ತಮಿಳಿನಲ್ಲಿ ಕಿಟ್ಟಿ–ಪುಲ್, ಕಾಂಬೋಡಿಯನ್ ಭಾಷೆಯಾದ ಖ್ಮೇರ್ ಪ್ರಕಾರ ಕೋನ್ ಕೊ. ಅಮೇರಿಕಾದಲ್ಲಿ ಈ ಆಟವನ್ನು ಪೀ–ವೀ ಎಂದು ಕರೆಯುತ್ತಾರೆ. ಈ ಆಟವನ್ನು ದಕ್ಷಿಣ ಯೂರೋಪ್‌ನ ಗ್ರಾಮೀಣ ಪ್ರದೇಶಗಳಲ್ಲೂ ಆಡುತ್ತಾರೆಂದರೆ ಆಶ್ಚರ್ಯವಾಗಬಹುದಲ್ಲವೇ.



ಈ ಆಟ ಎಲ್ಲಿ ಪ್ರಾರಂಭ ಗೊಂಡಿತು ಎಂಬುದರ ಬಗ್ಗೆ ನಿಖರ ಮಾಹಿತಿ ಇಲ್ಲದಿದ್ದರೂ, ಬಹುಶಃ ಮೌರ್ಯರ ಕಾಲಕ್ಕೂ ಮುಂಚೆ ಇದ್ದಿರಬಹುದೆಂಬ ಅನಿಸಿಕೆ ಇದೆ. ಇದೇ ತರದ ಆಟವನ್ನು ಇಟಲಿಯಲ್ಲೂ ಆಡುತ್ತಿದ್ದು, ಆಟವನ್ನು ಲಿಪ್ಪಾ ಎಂದು ಕರೆಯುತ್ತಾರೆ,

ಮರದಿಂದ ತಯಾರಿಸಲ್ಪಟ್ಟ ಆಟಿಕೆಯಿಂದ ಈ ಆಟ ಆಡಲ್ಪಡುತ್ತದೆ. ಅಂತಹ ನಿರ್ದಿಷ್ಟ ನಿಯಮಗಳೇನೂ ಇಲ್ಲದ ಈ ಆಟವು, ಆಡುವವನ ಪ್ರತಿಭೆ, ಶಕ್ತಿಯ ಮೇಲೆ ಅವಲಂಬಿಸಿದೆ. ನೆಲದ ಮೇಲೆ ನಿರ್ದಿಷ್ಟಪಡಿಸಿದ ಸ್ಥಳದಲ್ಲಿ ವೃತ್ತಾಕಾರದ ಗುರುತು ಮಾಡಿ, ಆ ಗುರುತು ಮಾಡಲ್ಪಟ್ಟ ಸ್ಥಳದ ಮೇಲೆ ಗಿಲ್ಲಿಯನ್ನು ಇಟ್ಟು, ದಾಂಡಿನಿಂದ ಗಿಲ್ಲಿಯ ತುದಿಗೆ ಹೊಡೆದಾಗ ಗಿಲ್ಲಿಯು ನೆಲದ ಮೇಲಿಂದ ಪುಟಿಯುತ್ತದೆ. ಅದು ನೆಲಕ್ಕೆ ಬೀಳುವ ಮುನ್ನ ಅದನ್ನು ದಾಂಡಿನಿಂದ ಹೊಡೆಯಬೇಕು. ಹೀಗೆ ಮೂರು ಅವಕಾಶಗಳು ನೀಡಲ್ಪಡುತ್ತದೆ. ಪುಟಿದ ಗಿಲ್ಲಿಯನ್ನು ಮೂರು ಸಲದಲ್ಲಿ ಒಮ್ಮೆಯಾದರೂ ಹೊಡೆಯಲು ವಿಫಲನಾದರೆ ಆ ಆಟಗಾರ ಔಟ್ ಎಂದರ್ಥ. ಆ ಆಟಗಾರನು ಪುಟಿದ ಗಿಲ್ಲಿಯನ್ನು ಹೊಡೆದ ನಂತರ ದಾಂಡನ್ನು ವೃತ್ತಾಕಾರದ ಮೇಲೆ ಇಡಬೇಕು. ಹಾಗೆ ಹೊಡೆದ ಗಿಲ್ಲಿಯು ನೆಲಕ್ಕೆ ಬೀಳುವ ಮುಂಚೆ ಎದುರಾಳಿಯು ಹಿಡಿದರೆ ಈ ಆಟಗಾರ ಔಟ್ ಆಗುತ್ತಾನೆ. ಒಂದು ವೇಳೆ ಹಿಡಿಯದೆ ಹೋದರೆ, ಎದುರಾಳಿಯು ಆ ಗಿಲ್ಲಿಯನ್ನು ತೆಗೆದುಕೊಂಡು, ವೃತ್ತಾಕಾರದ ಕಡೆ ಎಸೆಯಬೇಕು. ಗಿಲ್ಲಿಯು ವೃತ್ತಾಕಾರದಲ್ಲಿ ಬಂದು ನಿಂತರೆ ಅಥವಾ ವೃತ್ತಾಕಾರದ ಮೇಲೆ ಇರಿಸಿರುವ ದಾಂಡಿಗೆ ಬಡಿದರೆ ಆಟಗಾರ ಔಟ್ ಎಂದರ್ಥ. ಒಂದು ವೇಳೆ ಗಿಲ್ಲಿಯು ವೃತ್ತಾಕಾರದಲ್ಲಿ ಬಂದು ನಿಲ್ಲದಿದ್ದರೆ, ಅದು ವೃತ್ತದಿಂದ ಎಷ್ಟು ದೂರದಲ್ಲಿ ಇರುತ್ತದೆಯೋ , ವೃತ್ತದಿಂದ ಗಿಲ್ಲಿಯು ಇರುವ ಸ್ಥಳದ ವರೆಗೆ ದಾಂಡಿನ ಉದ್ದಳತೆಯಿಂದ ಅಳೆಯಲಾಗುತ್ತದೆ. ಎಷ್ಟು ಸಲ ಅಳತೆ ಮಾಡಲಾಗುತ್ತದೆಯೋ, ಅಂತಹ ಪ್ರತಿಯೊಂದು ಉದ್ದಳತೆಗೆ ಒಂದು ಅಂಕ ಲಭಿಸುತ್ತದೆ.

ಇದನ್ನು ಅಂತರ ರಾಷ್ಟ್ರೀಯ ಆಟವಾಗಿ ಭಾರತ ಹಾಗೂ ಪಾಕಿಸ್ತಾನದ ನಡುವೆ ಆಡಲಾಯಿತು. ಪಾಕಿಸ್ತಾನ ಗೆದ್ದಿತ್ತು. ಹಾ, ಹುಷಾರು, ನಗರ ಪ್ರದೇಶಗಳಲ್ಲಿ ಆಟದ ಮೈದಾನ ಕಡಿಮೆ, ರಸ್ತೆಯಲ್ಲೇ ಆಡೋಣವೆಂದರೆ, ಮನೆಗಳ ಗಾಜು ಪುಡಿಯಾಗಿ ಬೈಗುಳ ಕೇಳಬೇಕಾಗಿಬರಬಹುದು. ಬೇಗನೆ ಯಾವುದಾದರೂ ಗ್ರಾಮೀಣ ಪ್ರದೇಶಕ್ಕೆ ಒಂದು ಪ್ರವಾಸ ಹಾಕಿಕೊಂಡು, ಅಲ್ಲಿ ಕುಂಟೆಬಿಲ್ಲೆ, ಐಸ್‌ಪೈಸ್, ಚೂರ್‌ಚೆಂಡು, ಲಗೋರಿ, ಬುಗುರಿ, ಗಿಲ್ಲಿ ದಾಂಡು ಆಡಿ ಬನ್ನಿ. ನಮಗೆ ನಿಮ್ಮ ಅನುಭವವನ್ನು ತಿಳಿಸಿ.

# ವಿದ್ಯುತ್ ಸರಬರಾಜಿಗೆ ವಿತರಣ ಲೈಸೆನ್ಸ್‌ದಾರರ ಷರತ್ತುಗಳು

*ಮುಂದುವರಿದ ಭಾಗ...*

i) ಸ್ಥಾಪನಕ್ಕೆ ವಿದ್ಯುತ್ ಸರಬರಾಜು ಸೇವೆಯನ್ನು ಒದಗಿಸುವ ಲೈಸೆನ್ಸುದಾರರ ಇಂಜಿನಿಯರ್ ಅವರು ಸೇವೆಯನ್ನು ಪ್ರಾರಂಭಿಸಿದ್ದಕ್ಕಾಗಿ ಗ್ರಾಹಕರಿಗೆ ಕೆಳಕಂಡ ಅಂಶಗಳನ್ನು ಸೂಚಿಸಿರುವ ಸರಬರಾಜು ಸೇವಾ ದೃಢೀಕರಣ ಪತ್ರವನ್ನು ನೀಡತಕ್ಕದ್ದು:

| | |
|---|---|
| (ಎ) | ಗ್ರಾಹಕರ ಹೆಸರು ಮತ್ತು ವಿಳಾಸ |
| (ಬಿ) | ಆರ್.ಆರ್.ಸಂಖ್ಯೆ |
| (ಸಿ) | ಸೇವೆ ಪ್ರಾರಂಭಿಸಿದ ದಿನಾಂಕ |
| (ಡಿ) | ಮಂಜೂರಾದ ಹೊರೆ/ಒಪ್ಪಂದಿತ ಬೇಡಿಕೆ |
| (ಇ) | ಸಂಪರ್ಕಿತ ಹೊರೆ |
| (ಎಫ್) | ಮಾಪಕ ವಿವರ, ಅಂದರೆ ಸಿ.ಟಿ/ಪಿ.ಟಿ. ಅನುಪಾತ {ಮಾಪಕ ಸ್ಥಿರಾಂಕ ಗುಣಕ}, ಸೇವೆ ಪ್ರಾರಂಭಗೊಂಡಾಗ ಮಾಪಕದಲ್ಲಿನ ರೀಡಿಂಗ್ ಇತ್ಯಾದಿ |
| (ಜಿ) | ಮೊಹರಿನ ಸ್ಥಿತಿ/ಮೊಹರಿನ ಸಂಖ್ಯೆ, ಇದ್ದರೆ |
| (ಎಚ್) | ವಿದ್ಯುತ್ ಸಂಪರ್ಕ ಸೇವಾ ಮಾರ್ಗದ ಗಾತ್ರ |
| (ಐ) | ಫ್ಯೂಸ್ ರೇಟಿಂಗ್ |
| (ಜೆ) | ಸಂಗ್ರಹಿಸಿದ ಪ್ರಾರಂಭಿಕ ಭದ್ರತಾ ಠೇವಣಿ, ಮಾಪಕ ಭದ್ರತಾ ಠೇವಣಿ ವಿವರಗಳು (ರಸೀತಿ ಸಂಖ್ಯೆ) |
| (ಕೆ) | ವಿದ್ಯುತ್ ಪರವಾನಗಿ ಹೊಂದಿರುವ ಗುತ್ತಿಗೆದಾರರ ಹೆಸರು ಮತ್ತು ವಿಳಾಸ ಹಾಗೂ ಅವರ ಪರವಾನಗಿ ಸಂಖ್ಯೆ |

ಗ್ರಾಹಕರು ಮಾಡಿಕೊಂಡಿರುವ ಒಪ್ಪಂದದ ನಿವೇದನೆಯ ಪ್ರತಿಯನ್ನು ಗ್ರಾಹಕರಿಗೆ ನೀಡಿ ಪರೀಕ್ಷಾ ವರದಿಯ ಮೇಲೆ ಗ್ರಾಹಕರಿಂದ ಅವಶ್ಯ ತಲುಪೊಪ್ಪಿಗೆಯ ಸಹಿಯನ್ನು ಪಡೆಯತಕ್ಕದ್ದು.

vii) ಗ್ರಾಹಕ ಅಥವಾ ಆತನ ಪ್ರತಿನಿಧಿಯು ಸೀಲಿಂಗ್ ರಿಜಿಸ್ಟರಿನಲ್ಲಿ ಮತ್ತು ಕಾರ್ಯಸಮಾಪನಾ ವರದಿಯಲ್ಲಿ, ಅವರ ಸ್ಥಾಪನಕ್ಕೆ ವಿದ್ಯುತ್ ಸರಬರಾಜು ಸೇವೆ ನೀಡಲಾಗಿದೆ ಎಂದು, ಮಾಪಕ, ಹೊರೆ ನಿಯಂತ್ರಕ, ಮಾಪಕ ಅಳವಡಿಕೆ ಪೆಟ್ಟಿಗೆ/ಕ್ಯುಬಿಕಲ್/ಪ್ಯಾನೆಲ್ ಇವುಗಳಿಗೆ ಮೊಹರು ಹಾಕಲಾಗಿದೆ ಎಂದು ಸಹಿ ಹಾಕತಕ್ಕದ್ದು.

**4.09 ಸಾಮಾನ್ಯ**

i) ಗೃಹಬಳಕೆ/ವಾಣಿಜ್ಯೇತರ ಸ್ಥಾಪನಗಳ ಪ್ರಕರಣಗಳಲ್ಲಿ, ಮಾಲೀಕರೇ ಆ ಆವರಣದ ಅನುಭೋಗದಾರರಾಗಿರದಿದ್ದರೆ, ಅಂತಹ ಪ್ರಕರಣಗಳಲ್ಲಿ ಮಾಲೀಕರ ಸಮ್ಮತಿಯ ಅವಶ್ಯಕತೆ ಬೇಕಿಲ್ಲ. ಆಗ, ಅನುಭೋಗದಾರಿಕೆಯ ಸಾಕ್ಷಿ, ಅಂದರೆ ಆವರಣದ ಬಳಕೆಗೆ ಮಾಲೀಕರಿಂದ ಅಧಿಕಾರ ಪತ್ರ, ಅಥವಾ ಇತ್ತೀಚಿನ ಬಾಡಿಗೆ ಪಾವತಿ ರಸೀತಿ ಅಥವಾ ಭೋಗ್ಯದಾರಿಕೆಯ ಪತ್ರವನ್ನು ಹಾಜರುಪಡಿಸತಕ್ಕದ್ದು.

ii) ಅರ್ಜಿದಾರರು ಆವರಣದ ಮಾಲಿಕರಾಗಿರದಿದ್ದಲ್ಲಿ, ಅನುಬಂಧ–8ರ ಪ್ರಕಾರ ನಷ್ಟಭರ್ತಿ ಮುಚ್ಚಳಿಕೆಯನ್ನು ನೀಡತಕ್ಕದ್ದು.

iii) ಆವರಣದಲ್ಲಿರುವ ಅನಧಿಕೃತ ಅನುಭೋಗದಾರರಿಗೆ ಯಾವುದೇ ಉದ್ದೇಶಕ್ಕಾಗಲೀ ವಿದ್ಯುತ್ ಸರಬರಾಜು ಸೌಕರ್ಯವನ್ನು ನೀಡತಕ್ಕದ್ದಲ್ಲ.

iv) ವಿದ್ಯುತ್ ಸರಬರಾಜು ಒಪ್ಪಂದ ಮುಕ್ತಾಯಗೊಂಡಿರುವ ಆವರಣಕ್ಕೆ(ಸೇವಾ ಮಾರ್ಗವನ್ನು ಕಳಚಿರಲಿ ಅಥವಾ ಕಳಚಿಲ್ಲದಿರಲಿ) ವಿದ್ಯುತ್ ಸರಬರಾಜು ಬಯಸುವ ಯಾವುದೇ ವ್ಯಕ್ತಿಯನ್ನು ಹೊಸ ಅರ್ಜಿದಾರನೆಂದು ಪರಿಗಣಿಸಲಾಗುವುದು. ಲೈಸೆನ್ಸುದಾರರು ವಿದ್ಯುತ್ ಸರಬರಾಜು ಕಲ್ಪಿಸುವ ಮುಂಚೆ ಆ ಆವರಣದಲ್ಲಿದ್ದ ಹಿಂದಿನ ಸ್ಥಾಪನದ ಯಾವುದೇ ಬಾಕಿಯನ್ನು ಆ ವ್ಯಕ್ತಿಯಿಂದ ವಸೂಲು ಮಾಡತಕ್ಕದ್ದು.

v) ಅಪಾವತಿಗಾಗಿ ವಿದ್ಯುತ್ ಸಂಪರ್ಕ ಕಡಿತದಲ್ಲಿರುವ ಯಾವುದೇ ಒಂದು ನಿರ್ದಿಷ್ಟ ಸ್ಥಾಪನದ ಲೆಕ್ಕದಲ್ಲಿರುವ ಬಾಕಿಯನ್ನು, ಅದೇ ಸ್ಥಾಪನದ ಗ್ರಾಹಕನ ಹೆಸರಿನಲ್ಲಿರುವ ಗೃಹ ಬಳಕೆ ಸ್ಥಾಪನವನ್ನು ಹೊರತುಪಡಿಸಿ ಇತರೆ ಯಾವುದೇ ಸ್ಥಾಪನದ ಲೆಕ್ಕದಲ್ಲಿರುವ ಬಾಕಿ ಎಂದು ವಸೂಲಿ ಮಾಡತಕ್ಕದ್ದು. ಆದರೆ, ಯಾವುದೇ ಇತರ ಸ್ಥಾಪನದ ಬಾಕಿಯನ್ನು ಗೃಹಬಳಕೆ ಸ್ಥಾಪನದ ಲೆಕ್ಕಕ್ಕೆ ಸೇರಿಸಬಾರದು. ಒಂದು ವೇಳೆ ಒಬ್ಬನೇ ಗ್ರಾಹಕನ ಒಂದು ಸ್ಥಾಪನದ ಬಾಕಿಯನ್ನು ಅದೇ ಗ್ರಾಹಕನ ಮತ್ತೊಂದು ಸ್ಥಾಪನದ ಲೆಕ್ಕದಲ್ಲಿ ಸೇರಿಸಿ ವಸೂಲಿಯನ್ನು ಮಾಡುವ ಮುನ್ನ ಲೈಸೆನ್ಸುದಾರರು ಆ ಗ್ರಾಹಕನಿಗೆ ಪ್ರಕರಣದ ಸ್ಪಷ್ಟ ವಿವರಣೆಯ ಸಹಿತ ಪ್ರತ್ಯೇಕ ನೋಟೀಸನ್ನು ಜಾರಿ ಮಾಡತಕ್ಕದ್ದು.

vi) ಲೈಸೆನ್ಸುದಾರರು ವಿದ್ಯುತ್ ಸರಬರಾಜು ಏರ್ಪಾಡು ಮಾಡುತ್ತಾರೆ ಎಂದ ಮಾತ್ರಕ್ಕೆ, ಅರ್ಜಿದಾರರು ಇತರ ಕಾನೂನುಗಳ ಎಲ್ಲ ಅಗತ್ಯಗಳನ್ನು ಪಾಲಿಸಿದ್ದಾರೆ ಎಂದು ಭಾವಿಸತಕ್ಕದ್ದಲ್ಲ. ಇತರ ಕಾನೂನು ನಿಯಮಗಳ ಅಡಿಯಲ್ಲಿ ಶಾಸನಬದ್ಧ ಅಗತ್ಯತೆಗಳ ಪಾಲನೆಗೆ ಅರ್ಜಿದಾರರು ಜವಾಬ್ದಾರರಾಗಿದ್ದು, ಅರ್ಜಿದಾರರು ಪಾಲಿಸದಿದ್ದರೆ, ಈ ಮಟ್ಟಿಗೆ ಅರ್ಜಿದಾರರೊಬ್ಬಗೇ ಹೊಣೆಗಾರರಾಗಿರುತ್ತಾರೆಯೇ ಹೊರತು ಕೈಗೊಳ್ಳಬಹುದಾದ ಯಾವುದೇ ಕ್ರಮಕ್ಕೆ ಲೈಸೆನ್ಸುದಾರರು ಜವಾಬ್ದಾರರಾಗುವುದಿಲ್ಲ.

vii) ಭದ್ರತಾ ಠೇವಣಿ ಪಾವತಿ, ವಿದ್ಯುತ್ ಮಾರ್ಗ ಅಥವಾ ವಿದ್ಯುತ್ ಸ್ಥಾವರ, ಮೇಲ್ವಿಚಾರಣಾ ಶುಲ್ಕ, ರೆವಿನ್ಯೂ ಶುಲ್ಕ, ಇತರೆ ಶುಲ್ಕಗಳನ್ನು ಕಲಮು 29.04ರಲ್ಲಿ ನಿರ್ದಿಷ್ಟಪಡಿಸಿರುವ ರೀತಿಯಲ್ಲಿ ಪಾವತಿಸತಕ್ಕದ್ದು.

viii) ಮೊಹರು ಹಾಕುವುದಕ್ಕೆ ಅನುಕೂಲವಿರುವಂತಹ ಸೂಕ್ತ ಸಾಮರ್ಥ್ಯದ ಹೊರೆ ನಿಯಂತ್ರಕವನ್ನು ಅರ್ಜಿದಾರರು ಒದಗಿಸತಕ್ಕದ್ದು. ಸ್ಥಾಪನಕ್ಕೆ ವಿದ್ಯುತ್ ಸರಬರಾಜು ಒದಗಿಸುವ ಸಂದರ್ಭದಲ್ಲಿ ಈ ಹೊರೆ ನಿಯಂತ್ರಕಕ್ಕೆ ಮೊಹರು ಹಾಕಲಾಗುವುದು. ಹೊರೆ ನಿಯಂತ್ರಕದೊಂದಿಗೆ,

*....ಮುಂದುವರಿಯುವುದು*

# ಗಣರಾಜ್ಯೋತ್ಸವ




ಭಾರತದ ಇತಿಹಾಸದಲ್ಲಿ 1950ನೇ ಇಸವಿ ಜನವರಿ 26 ಒಂದು ಅವಿಸ್ಮರಣೀಯ ದಿನ. ಅದೇ ದಿನ ಭಾರತ "ಸರ್ವತಂತ್ರ ಸ್ವತಂತ್ರ ಗಣರಾಜ್ಯ" ಎಂದು ಘೋಷಣೆಯಾಗಿದ್ದು.

1947 ರ ಆಗಸ್ಟ್ 15 ರಂದು ದೇಶಕ್ಕೆ ಸ್ವಾತಂತ್ರ್ಯ ಬಂದರೂ ಸಹ ಸಂವಿಧಾನ ಅಂಗೀಕಾರವಾಗಿದ್ದು 1950ರ ಜನವರಿ 26 ರಂದು. ಯಾವುದೇ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಸಂವಿಧಾನ ಅಂಗೀಕಾರ ಆಗುವುದು ಮಹತ್ವದ ವಿಚಾರ. ಹಾಗಾಗಿ ಗಣರಾಜ್ಯ ದಿನಕ್ಕೆ ವಿಶೇಷ ಮಹತ್ವ ಇದೆ.

ಸುಮಾರು 150 ವರ್ಷಗಳ ಬ್ರಿಟಿಷರ ಆಡಳಿತ ಕೊನೆಗೊಂಡ ನಂತರ ರಚನೆಯಾದ ಸ್ವತಂತ್ರ ಭಾರತದ ಸಂವಿಧಾನ ದೇಶದ ಪ್ರತಿಯೊಬ್ಬ ಪ್ರಜೆಗೂ ಮೂಲಭೂತ ಹಕ್ಕುಗಳು, ನ್ಯಾಯ, ಸ್ವಾತಂತ್ರ್ಯ, ಸಮಾನತೆ ಇತ್ಯಾದಿಗಳನ್ನು ನೀಡಿತು.

ಮಹಾತ್ಮಾಗಾಂಧಿ, ಜವಾಹರಲಾಲ್ ನೆಹರು, ಸರ್ದಾರ್ ವಲ್ಲಭಭಾಯಿ ಪಟೇಲ್ ಮುಂತಾದ ಧೀಮಂತ ನಾಯಕರ ನಿರಂತರ ಹೋರಾಟದ ಪರಿಣಾಮವಾಗಿ ದೇಶಕ್ಕೆ ಸ್ವಾತಂತ್ರ್ಯ ಲಭಿಸಿತು.

ನಂತರದ ದಿನಗಳಲ್ಲಿ ಮಹಾನ್ ಮಾನವತಾವಾದಿ ಡಾ.ಬಿ.ಆರ್. ಅಂಬೇಡ್ಕರ್ ಅವರ ನೇತೃತ್ವದಲ್ಲಿ ಸಂವಿಧಾನದ ರಚನೆ ಆಯಿತು.

ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಅದಕ್ಕಾಗಿ ಹುತಾತ್ಮರಾದವರನ್ನು ಗಣರಾಜ್ಯ ದಿನದಂದು ಸ್ಮರಿಸಲಾಗುತ್ತದೆ.

ಪ್ರತಿವರ್ಷ ಗಣರಾಜ್ಯ ದಿನದಂದು ರಾಜಧಾನಿ ನವದೆಹಲಿಯಲ್ಲಿ ನಡೆಯುವ ಗಣರಾಜ್ಯ ದಿನದ ಪರೇಡ್ ಇಡೀ ವಿಶ್ವದಲ್ಲೇ ಒಂದು ವಿಶಿಷ್ಟವಾದ ಕಾರ್ಯಕ್ರಮ. ಅಂದಿನ ಪರೇಡ್ ವೀಕ್ಷಿಸಿದ ಯಾರೇ ಆಗಲಿ ಅದರ ಮಹತ್ವವನ್ನು ಅರಿಯದೇ ಇರಲಾರರು.

ಅಂದು ನಡೆಯುವ ವೈಭವವನ್ನು ಸಾರುವ ಸ್ತಬ್ಧ ಚಿತ್ರಗಳು, ಸೈನಿಕರ ಪಥಸಂಚಲನ ಇತ್ಯಾದಿಗಳು ನೋಡುಗರ ಕಣ್ಮನ ಸೆಳೆಯುತ್ತವೆ. ಆ ಸಂದರ್ಭವನ್ನು ಕಣ್ತುಂಬಿಕೊಳ್ಳುವುದೇ ಒಂದು ಸುಯೋಗ. ಇದನ್ನು ವೈವಿಧ್ಯತೆಯಲ್ಲಿ ಏಕತೆಯನ್ನು ಸಾರುವ ಅಭೂತಪೂರ್ವ ಮೆರವಣಿಗೆ ಎಂದೇ ಹೇಳಬಹುದು.

ಪ್ರತಿವರ್ಷ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಒಬ್ಬರು ವಿದೇಶಿ ಗಣ್ಯರು ಮುಖ್ಯ ಅತಿಥಿಗಳಾಗಿರುತ್ತಾರೆ. ಹಾಗಾಗಿ ಗಣರಾಜ್ಯ ದಿನವನ್ನು ಆಚರಿಸುವುದು ಭಾರತೀಯರಿಗೆ ಒಂದು ವಿಶೇಷ ಹಬ್ಬವನ್ನು ಆಚರಿಸಿದಂತೆ ಮಹತ್ವದ ದಿನ.

# ನಮ್ಮ ದೇಶದ ಪ್ರಧಾನಿಗಳು ಅಧಿಕಾರದಲ್ಲಿದ್ದ ಸಮಯದಲ್ಲಿ ತೆಗೆದುಕೊಂಡಿರುವ ಕೆಲವೊಂದು ಮಹತ್ವದ ನಿರ್ಧಾರಗಳ ಪಕ್ಷಿನೋಟ

ದೇಶದಲ್ಲಿ ಹೆಚ್ಚು ಮೊತ್ತದ ಅಂದರೆ 500 ಮತ್ತು 1000 ರೂ ಮುಖಬೆಲೆಯ ನೋಟುಗಳ ರದ್ಧತಿ ಈಗ ಎಲ್ಲೆಡೆ ಚರ್ಚೆಗೆ ಗ್ರಾಸವಾಗಿದೆ.

ಪ್ರಧಾನಿ ನರೇಂದ್ರ ಮೋದಿಯವರ ಈ ದಿಟ್ಟ ನಿರ್ಧಾರ ದೇಶದಲ್ಲಿ ಚಲಾವಣೆಯಲ್ಲಿದ್ದ ಖೋಟಾ ನೋಟುಗಳು ಹಾಗೂ ಕಪ್ಪು ಹಣದ ದಂದೆಗೆ ಕಡಿವಾಣ ಹಾಕಲು ಮಹತ್ವದ ನಿರ್ಧಾರ ಎಂಬ ಅಭಿಪ್ರಾಯ ಎಲ್ಲೆಡೆ ಕೇಳಿಬಂದಿದೆ.

ಈ ನಿಟ್ಟಿನಲ್ಲಿ ಆರ್ಥಿಕ ಅಭಿವೃದ್ಧಿ ಹಣದುಬ್ಬರ ಕಡಿಮೆಯಾಗಬಹುದೆಂಬ ಆಶಾದಾಯಕ ವಾತಾವರಣ ಎಲ್ಲೆಡೆ ನಿರ್ಮಾಣವಾಗಿದೆ.

ಈ ಹಿಂದೆ ನಮ್ಮ ದೇಶದ ಪ್ರಧಾನಿಗಳು ಅಧಿಕಾರದಲ್ಲಿದ್ದ ಸಮಯದಲ್ಲಿ ತೆಗೆದುಕೊಂಡಿರುವ ಕೆಲವೊಂದು ಮಹತ್ವದ ನಿರ್ಧಾರಗಳ ವಿವರ ಹೀಗಿದೆ :

ಸ್ವತಂತ್ರ ಭಾರತದ ಮೊದಲ ಪ್ರಧಾನಿ ಪಂಡಿತ್ ಜವಾಹರಲಾಲ್ ನೆಹರು ಅವರು ಒಬ್ಬ ದೊಡ್ಡ ಸಮಾಜ ಸುಧಾರಕರಾಗಿದ್ದರು. ಅವರ ಕಾಲದಲ್ಲಿ ಆಧುನಿಕ ಭಾರತ ನಿರ್ಮಾಣಕ್ಕಾಗಿ ಕೈಗಾರಿಕೆಗಳನ್ನು ಸ್ಥಾಪಿಸಿದರು. ಹಿಂದು ವಿಧವೆಯರಿಗೆ ಪುರುಷರಷ್ಟೇ ಸಮಾನ ಹಕ್ಕುಗಳನ್ನು ನೀಡಿ ಕಾನೂನು ಜಾರಿಗೆ ತಂದ ಕೀರ್ತಿ ಅವರಿಗೆ ಸಲ್ಲುತ್ತದೆ.

ನಂತರ ಬಂದ ಪ್ರಧಾನಿ ಲಾಲ್‌ಬಹಾದ್ದೂರ್ ಶಾಸ್ತ್ರಿ ಅವರು "ಜೈ ಜವಾನ್ ಜೈ ಕಿಸಾನ್" ಘೋಷಣೆ ಮೂಲಕ ಜನಪ್ರಿಯರಾದರು. ಅವರ ಕಾಲದಲ್ಲಿ "ಕ್ಷೀರ ಕ್ರಾಂತಿ"ಗೆ ಒತ್ತುಕೊಡುವ ಮೂಲಕ ದೇಶದಲ್ಲಿ ಹಾಲು ಉತ್ಪಾದನೆಗೆ ಪ್ರಾಮುಖ್ಯತೆ ನೀಡಿದರು.

ಶ್ರೀಮತಿ ಇಂದಿರಾಗಾಂಧಿಯವರು ಪ್ರಧಾನಿಯಾಗಿದ್ದಾಗ 1969 ರಲ್ಲಿ ತೆಗೆದುಕೊಂಡ ಬ್ಯಾಂಕುಗಳ ರಾಷ್ಟ್ರೀಕರಣದ ನಿರ್ಧಾರ ಆಗ ದೇಶದಲ್ಲಿ ಅಲ್ಲೋಲಕಲ್ಲೋಲ ವಾತಾವರಣವನ್ನು ಸೃಷ್ಟಿಸಿತು.

ಆದರೆ ಸಾಮಾನ್ಯ ಜನತೆ ಅದನ್ನು ಸ್ವಾಗತಿಸಿದರು. ಇಂದಿರಾ ಅವರ ನಿರ್ಧಾರದ ಪರಿಣಾಮವಾಗಿ 14 ಬ್ಯಾಂಕುಗಳು ರಾಷ್ಟ್ರೀಕರಣಗೊಂಡವು. ರಾಷ್ಟ್ರೀಕರಣದಿಂದಾಗಿ ಕೃಷಿ, ಸಣ್ಣ ಹಾಗೂ ಮಧ್ಯಮ ಕೈಗಾರಿಕೆಗಳಿಗೆ ಹಣಕಾಸಿನ ನೆರವು ಪಡೆಯಲು ಸಾಧ್ಯವಾಯಿತು.

ರಾಜಧನ : ಅಧಿಕಾರವನ್ನು ಕಳೆದುಕೊಂಡ ನೂರಾರು ರಾಜ–ಮಹಾರಾಜರು ವಿಶ್ರಾಂತಜೀವನ ನಡೆಸುತ್ತಾ ಕುಳಿತಲ್ಲೇ ಪಡೆಯುತ್ತಿದ್ದ ಲಕ್ಷಾಂತರ ರೂಪಾಯಿ ರಾಜಧನವನ್ನು ರದ್ದುಮಾಡಿ ದಿಟ್ಟತನ ತೋರಿದ ಹೆಗ್ಗಳಿಕೆ ಇಂದಿರಾಗಾಂಧಿಯವರಿಗೆ ಸಲ್ಲುತ್ತದೆ.

ರಾಜೀವ್ ಗಾಂಧಿ ಅವರ ಆಡಳಿತದಲ್ಲಿ ಅತ್ಯಾಧುನಿಕ ಆಡಳಿತ ಪದ್ಧತಿಯನ್ನು ಕಂಪ್ಯೂಟರ್ ಬಳಕೆ ಮೂಲಕ ಜಾರಿಗೆ ತರಲಾಯಿತು.

ವಿ.ಪಿ ಸಿಂಗ್ ಅವರು ರಚಿಸಿದ ಬಿ.ಪಿ ಮಂಡಲ್ ನೇತೃತ್ವದ ಆಯೋಗ ಹಿಂದುಳಿದ ವರ್ಗಗಳಿಗೆ ವರದಾನವಾಯಿತು.

ವಾಜಪೇಯಿ ಅವರ ಕಾಲದಲ್ಲಿ ದೂರಸಂಪರ್ಕ ಉದ್ಯಮ ಅತ್ಯುನ್ನತ ಮಜಲನ್ನು ತಲುಪಿತು. ಕೈಗಾರಿಕೆಗಳಿಗೆ ಅನುಕೂಲವಾದ ನೀತಿ ಹಾಗೂ ಮೌಲ್ಯಾಧಾರಿತ ತೆರಿಗೆಯನ್ನು ಅವರು ಜಾರಿಗೆ ತಂದರು.

ಪಿ.ವಿ. ನರಸಿಂಹರಾವ್, ಅಟಲ್ ಬಿಹಾರಿ ವಾಜಪೇಯಿ, ಎಚ್.ಡಿ.ದೇವೇಗೌಡ ಹಾಗೂ ಮನಮೋಹನ್‌ಸಿಂಗ್ ಅವರ ಅವಧಿಯಲ್ಲಿ ದೇಶದ ಆರ್ಥಿಕ ಪರಿಸ್ಥಿತಿ ಸುಧಾರಣೆಗೆ ಹೆಚ್ಚಿನ ಗಮನ ನೀಡಲಾಯಿತು.

ಮನಮೋಹನ್‌ಸಿಂಗ್ ಅವರ ಅಧಿಕಾರದ ಅವಧಿಯಲ್ಲಿ ದೇಶದ ವಿವಿಧ ರಾಜ್ಯಗಳಲ್ಲಿ ಒಟ್ಟು ಎಂಟು ಭಾರತೀಯ ತಾಂತ್ರಿಕ ಸಂಸ್ಥೆಗಳನ್ನು (ಐಐಟಿ) ತೆರೆಯಲಾಯಿತು.

***ತಂ ಭೂಸುತಾಮುಕ್ತಿಮುದಾರಹಾಸಂ ವಂದೇ***
***ಯತೋ ಭವ್ಯಭವಂ ದಯಾಶ್ರೀಃ ॥1॥***

***ಶ್ರೀಃಯಾದವಂಭವ್ಯಭತೋಯದೇವಂ***
***ಸಂಹಾರದಾಮುಕ್ತಿಮುತಾಸುಭೂತಂ ॥2॥***

ಮೇಲಿನ ಮೊದಲ ಶ್ಲೋಕ ರಾಮಸ್ತುತಿ ಹಾಗೂ
ಎರಡನೆಯ ಶ್ಲೋಕ ಕೃಷ್ಣಸ್ತುತಿ.
ರಾಮ ಕೃಷ್ಣ ಇಬ್ಬರೂ ಒಬ್ಬನೇ ದೇವ ಎನ್ನುವುದಕ್ಕೆ
ಈ ಶ್ಲೋಕಗಳೇ ಸಾಕ್ಷಿ.
ಮೇಲಿನ 1ನೇ ಶ್ಲೋಕವನ್ನು ತಿರುಗುಮುರುಗಾಗಿ
ಓದಿದರೆ ಅದುವೇ 2ನೆಯ ಶ್ಲೋಕ.

**ಅನಂತ ಎ.ಎನ್.**
ಸ.ಪ್ರ.ವ್ಯ(ಹ ಮತ್ತು ವಾ)

## ಚುಟುಕು ಕವನ

ನಮ್ಮ ಬಾಳ ಕತ್ತಲೆಯ ಕಳೆದು
ಮನೆ ಮನೆಗೆ ಬೆಳಕು ನೀಡಿದೆ
ನಮ್ಮ ದೂರಿಗೆ ಮನದಿ ಸ್ಪಂದಿಸಿ
ಮನದ ಮನೆಯ ಕಾರಂಜಿ ನೀನಾದೆ
ನಿಮ್ಮ ಸೇವೆಯು ಸತ್ಯ ಸುಂದರ
ಮನದಿ ನಮಿಸುವೆ ನಿತ್ಯ ನಿರಂತರ

**ಶ್ರೀ ಎನ್.ಎಲ್. ಪ್ರಸನ್ನ ಕುಮಾರ್**
ಸಹಾಯಕ ಇಂಜಿನಿಯರ್ (ತಾ),
ಕೆಂಗೇರಿ ವಿಭಾಗ, ಬೆಂಗಳೂರು

# ಪ್ರೊ. ಬರಗೂರು ರಾಮಚಂದ್ರಪ್ಪ



ಪ್ರೊ. ಬರಗೂರು ರಾಮಚಂದ್ರಪ್ಪ ಅವರು ಸಾಹಿತ್ಯ, ಸಿನಿಮಾ ಹಾಗೂ ಸಾಮಾಜಿಕ ಚಟುವಟಿಕೆಗಳಲ್ಲಿ ತಮ್ಮನ್ನು ಸದಾ ಕ್ರಿಯಾಶೀಲವಾಗಿರಿಸಿಕೊಂಡಿರುವ ಅಪರೂಪದ ವ್ಯಕ್ತಿತ್ವ.

ತಾನು ನಂಬಿದ ತತ್ವಗಳನ್ನು ಬಿಟ್ಟುಕೊಡದೆ, ವ್ಯವಸ್ಥೆಯ ಜತೆ ರಾಜಿಯಾಗದೆ, ತನಗನ್ನಿಸಿದ್ದನ್ನೇ ಹೇಳುವ, ಅವಕಾಶಗಳು ಸಿಕ್ಕಾಗ ಅದನ್ನೇ ಮಾಡುವ ಬಂಡಾಯಗಾರ.

ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ಬರಗೂರಿನಲ್ಲಿ 1947 ರ ಅಕ್ಟೋಬರ್ 18 ರಂದು ಜನಿಸಿದ ಅವರು ತುಮಕೂರಿನಲ್ಲಿ ಬಿ.ಎ., ಪದವಿ ಪಡೆದ ನಂತರ ಬೆಂಗಳೂರು ವಿಶ್ವವಿದ್ಯಾಲಯದಿಂದ ಎಂ.ಎ. ಪದವಿ ಪಡೆದರು.

ಸಾಹಿತ್ಯ ಮತ್ತು ಸಂಸ್ಕೃತಿಯ ಕ್ಷೇತ್ರದಲ್ಲಿ ಪ್ರೊ. ಬರಗೂರು ರಾಮಚಂದ್ರಪ್ಪ ಅವರಿಗೆ ಬಹುದೊಡ್ಡ ಸ್ಥಾನವಿದೆ. ಇವರು ರಚಿಸಿದ ಪ್ರತಿಯೊಂದು ಕೃತಿಯೂ ಸಾಮಾಜಿಕ ಸಂವೇದನೆಗಳನ್ನು ದಾಖಲಿಸುವಲ್ಲಿ ತಾಜಾತನ ಹೊಂದಿವೆ.

ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿ ಅಧ್ಯಾಪಕರಾಗಿ ಸೇರಿ, ತುಮಕೂರು ಸ್ನಾತಕೋತ್ತರ ಕೇಂದ್ರದ ಮೊದಲ ನಿರ್ದೇಶಕರಾಗಿ ಅದರ ಬೆಳವಣಿಗೆಗೆ ಕಾರಣಕರ್ತರಾದರು.

ಕವಿಯಾಗಿ ಅವರು ಪ್ರಕಟಿಸಿದ ಕವನ ಸಂಕಲನಗಳು ಕನಸಿನ ಕನ್ನಿಕೆ, ಮರ ಕುಟಿಗ, ನೆತ್ತರಲ್ಲಿ ನೆಂದ ಹೂ, ಗುಲಾಮ ಗೀತೆ, ಕಂಟೆಸ್ಸಾದಲ್ಲಿ ಕಾವ್ಯ ಇತ್ಯಾದಿ. ಸುಂಟರಗಾಳಿ, ಕಪ್ಪು ನೆಲದ ಕೆಂಪುಕಾಲು, ಒಂದು ಊರಿನ ಕಥೆಗಳು, ಬಯಲಾಟದ ಭೀಮಣ್ಣ (ಕಥಾ ಸಂಕಲನಗಳು). ಸೂತ್ರ ಉಕ್ಕಿನ ಕೋಟೆ, ಬೆಂಕಿ, ಸೂರ್ಯ, ಶಬರಿ (ಕಾದಂಬರಿಗಳು).

ಸಾಹಿತ್ಯ ಮತ್ತು ರಾಜಕಾರಣ, ಸಂಸ್ಕೃತಿ ಮತ್ತು ಸೃಜನಶೀಲತೆ, ಬಂಡಾಯ ಮತ್ತು ಸಾಹಿತ್ಯ ಮೀಮಾಂಸೆ (ವಿಮರ್ಶಾ ಕೃತಿಗಳು) ಅವರು ನಿರ್ದೇಶಿಸಿದ 'ಒಂದು ಊರಿನ ಕತೆ', ಬೆಂಕಿ, ಸೂರ್ಯ, ಕೋಟೆ, ಕರಡಿಪುರ, ಹಗಲು ವೇಷ, ಶಬರಿ ಇತ್ಯಾದಿ ಸಿನಿಮಾಗಳು ಜನಮಾನಸದಲ್ಲಿ ಅದ್ಭುತ ಪರಿಣಾಮ ಬೀರಿದವುಗಳು.

ಬರಗೂರು ರಾಮಚಂದ್ರಪ್ಪರವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪುರಸ್ಕಾರ, ಹಂಪಿ ಕನ್ನಡ ವಿಶ್ವವಿದ್ಯಾಲಯದ ನಾಡೋಜ, ಪಂಪ ಪ್ರಶಸ್ತಿ, ಇತ್ಯಾದಿ ಪ್ರಶಸ್ತಿಗಳು ಲಭಿಸಿವೆ. ಚಿತ್ರರಂಗದಲ್ಲಿನ ಅವರ ಜೀವಮಾನ ಸಾಧನೆಯನ್ನು ಗುರುತಿಸಿ ರಾಜ್ಯ ಸರ್ಕಾರ 2014ನೇ ಸಾಲಿನ ಪುಟ್ಟಣ್ಣ ಕಣಗಾಲ್ ಪ್ರಶಸ್ತಿ ನೀಡಿ ಗೌರವಿಸಿದೆ.

ಕರ್ನಾಟಕ ಸಾಹಿತ್ಯ ಅಕಾಡೆಮಿ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಅವರು ಗಣನೀಯ ಸೇವೆ ಸಲ್ಲಿಸಿದ್ದಾರೆ.

ಇತ್ತೀಚೆಗೆ ರಾಯಚೂರಿನಲ್ಲಿ ನಡೆದ 82ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿರುವುದು ಅವರ ಹೆಗ್ಗಳಿಕೆಗೆ ಪಾತ್ರವಾಗಿದೆ.

# ಕೆಂಪು ಹಣ್ಣು-ತರಕಾರಿ ಮಹತ್ವ

ಡಯಟ್ ಬಗ್ಗೆ ಹೇಳುವಾಗ ಹಸಿರು ತರಕಾರಿಗಳ ಬಗ್ಗೆ ಹೆಚ್ಚಾಗಿ ಹೇಳುತ್ತಿರುತ್ತೇವೆ. ಆದರೆ ಕೆಂಪು ತರಕಾರಿಗಳ ಬಗ್ಗೆ, ಆಹಾರ ವಸ್ತುಗಳ ಬಗ್ಗೆ ಡಯಟ್ ಕ್ರಮದಲ್ಲಿ ಹೇಳಿರುವುದೇ ಕಮ್ಮಿ. ಕೆಂಪು ತರಕಾರಿಗಳು, ಹಸಿರು ತರಕಾರಿಗಳಷ್ಟೇ ಪ್ರಯೋಜನಕಾರಿಯಾಗಿವೆ. ಅನೇಕ ಕಾಯಿಲೆಗಳನ್ನು ಗುಣಪಡಿಸುವಲ್ಲಿ ಕೆಂಪು ತರಕಾರಿ ಹಾಗೂ ಹಣ್ಣುಗಳು ತುಂಬಾ ಉಪಯುಕ್ತವಾಗಿವೆ.



ಕೆಂಪು ತರಕಾರಿಗಳು ಹಾಗೂ ಹಣ್ಣುಗಳಲ್ಲಿ ಅತ್ಯಧಿಕ ವಿಟಮಿನ್‌ಗಳು, anti-oxidants ಹಾಗೂ ಅಧಿಕ ಪೋಷಕಾಂಶಗಳಿರುತ್ತವೆ. ಅದರಲ್ಲೂ ತುಂಬಾ ಕೆಂಪು ಬಣ್ಣವಿರುವ ಹಣ್ಣುಗಳು ಅತ್ಯಧಿಕ ಪ್ರಯೋಜನಗಳನ್ನು ಹೊಂದಿವೆ.

ಕೆಂಪು ತರಕಾರಿಗಳು ರಕ್ತ ಕಣಗಳ ಉತ್ಪತ್ತಿಗೆ ತುಂಬಾ ಸಹಕಾರಿಯಾಗಿವೆ. ತಲೆಸುತ್ತು, ಸುಸ್ತು ನಿವಾರಿಸಲು ಕೆಂಪು ಹಣ್ಣುಗಳನ್ನು ತಿಂದರೆ ಒಳ್ಳೆಯದು.

**ಕೆಂಪು ದ್ರಾಕ್ಷಿ:** ಕೆಂಪು ದ್ರಾಕ್ಷಿ ತಿನ್ನಲು ಸ್ವಲ್ಪ ಹುಳಿ ಅನಿಸಿದರೂ ಆರೋಗ್ಯಕ್ಕೆ ತುಂಬಾ ಒಳ್ಳೆಯದು. ಇದನ್ನು ಹಾಗೆಯೇ ತಿನ್ನಲು ಇಷ್ಟ ಪಡದಿದ್ದರೆ ಜ್ಯೂಸ್ ಮಾಡಿ ಕುಡಿಯಿರಿ. ಇದರ ಸಿಪ್ಪೆಯಲ್ಲಿ ಅಧಿಕ ಪೋಷಕಾಂಶವಿರುತ್ತದೆ.

**ಟೊಮೆಟೊ:** ಟೊಮೆಟೊವನ್ನು ಹಸಿಯಾಗೇ ತಿನ್ನಬಹುದು, ಜ್ಯೂಸ್ ಮಾಡಿ ಕುಡಿಯಬಹುದು, ಖಾದ್ಯಗಳಲ್ಲಿ ಬಳಸಬಹುದು. ಟೊಮೆಟೊ ಕ್ಯಾನ್ಸರ್ ಬರದಂತೆ ತಡೆಯುವುದರ ಜೊತೆಗೆ ಬೊಜ್ಜು ಬರದಂತೆ ತಡೆಯುತ್ತದೆ.

**ಕಲ್ಲಂಗಡಿ ಹಣ್ಣು:** ಕಲ್ಲಂಗಡಿ ಹಣ್ಣು ಹೃದಯದ ಆರೋಗ್ಯಕ್ಕೆ ತುಂಬಾ ಒಳ್ಳೆಯದು ಹಾಗೂ ಇದನ್ನು ಪ್ರತಿದಿನ ತಿಂದರೆ ರೋಗ ನಿರೋಧಕ ಸಾಮರ್ಥ್ಯ ಹೆಚ್ಚಾಗುವುದು.

**ದಾಳಿಂಬೆ:** ದಾಳಿಂಬೆಯಲ್ಲಿ ಮ್ಯಾಗ್ನಿಷಿಯಂ, ಪೊಟ್ಯಾಷಿಯಂ ಹಾಗೂ anti-oxidants ಅಧಿಕವಿರುವುದರಿಂದ ದೇಹದ ಹಾಗೂ ತ್ವಚೆಯ ಆರೋಗ್ಯ ಹೆಚ್ಚು ಮಾಡುತ್ತದೆ. ದಾಳಿಂಬೆಯ ಸಿಪ್ಪೆಯಲ್ಲಿ ಅಧಿಕ ಪೋಷಕಾಂಶವಿರುವುದರಿಂದ ಅದನ್ನು ಬಿಸಾಡಬೇಡಿ. ಎಣ್ಣೆಯಲ್ಲಿ ಹುರಿದು ಚಟ್ನಿ ಮಾಡಿ ತಿನ್ನಬಹುದು.

**ಸೇಬು:** ಸೇಬು ಆರೋಗ್ಯಕ್ಕೆ ಒಳ್ಳೆಯದು ಎಂದು ತಿಳಿದಿರುವ ಅಂಶ. ಸೇಬಿನ ಆರೋಗ್ಯಕರ ಗುಣಕ್ಕೆ ಅದರ ಕೆಂಪು ಬಣ್ಣ ಕೂಡ ಒಂದು ಕಾರಣವಾಗಿದೆ.

**ರಾಸ್ ಬೆರಿ:** ರಾಸ್ ಬೆರಿ ಹಣ್ಣುಗಳು ದೇಹದ ತೂಕವನ್ನು ಸಮತೋಲನದಲ್ಲಿಡುವುದರ ಜೊತೆಗೆ ಕಣ್ಣಿನ ದೃಷ್ಟಿಯನ್ನು ಕಾಪಾಡುವ ಸಾಮರ್ಥ್ಯ ಹೊಂದಿವೆ.

**ಹಣ್ಣಾದ ಮೆಣಸಿನಕಾಯಿ:** ಒಣ ಮೆಣಸಿನ ಕಾಯಿ ಅಥವಾ ಹಸಿ ಮೆಣಸಿನ ಕಾಯಿಗಿಂತ ಹಣ್ಣಾದ ಮೆಣಸಿನಲ್ಲಿ ಅಧಿಕ ಪೋಷಕಾಂಶವಿರುತ್ತದೆ. ಇದು ಹೃದಯದ ಸ್ವಾಸ್ಥ್ಯಕ್ಕೆ ತುಂಬಾ ಒಳ್ಳೆಯದು.

**ಸ್ಟ್ರಾಬರಿ ಹಣ್ಣು:** ಸ್ಟ್ರಾಬರಿ ಅಧಿಕ ರಕ್ತದೊತ್ತಡ ನಿಯಂತ್ರಿಸುವಲ್ಲಿ ತುಂಬಾ ಸಹಾಯಕಾರಿ. ಮೂಳೆ ಹಾಗೂ ಹೃದಯ ಆರೋಗ್ಯಕ್ಕೆ ತುಂಬಾ ಒಳ್ಳೆಯದು.

**ಬೀಟ್ ರೂಟ್:** ಬೀಟ್ ರೂಟ್ ನಲ್ಲಿ ಕಬ್ಬಿಣದಂಶ, ನಾರಿನಂಶ, ಕ್ಯಾಲ್ಸಿಯಂ, ವಿಟಮಿನ್ ಸಿ ಅಧಿಕವಾಗಿ ಇದ್ದು, ಪ್ರತಿದಿನ ಇದರ ಜ್ಯೂಸ್ ಕುಡಿದರೆ ರಕ್ತ ಹೀನತೆ ಸಮಸ್ಯೆಯನ್ನು ನಿವಾರಿಸುತ್ತದೆ.

**ಚೆರಿ ಹಣ್ಣು:** ಮೈಕೈ ನೋವು ನಿವಾರಿಸುವಲ್ಲಿ ಚೆರಿ ಹಣ್ಣು ತುಂಬಾ ಸಹಾಯಕಾರಿಯಾಗಿದೆ. ನಿದ್ರಾಹೀನತೆ ಸಮಸ್ಯೆ ಇರುವವರು ಇದನ್ನು ತಿಂದರೆ ಬೇಗನೆ ನಿದ್ದೆ ಬರುತ್ತದೆ. ಇದರಲ್ಲಿರುವ ಪೋಷಕಾಂಶಗಳು ಹಾಗೂ ವಿಟಮಿನ್‌ಗಳು ಆರೋಗ್ಯವನ್ನು ಹೆಚ್ಚಿಸುತ್ತವೆ.




ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯು ಭಾರತದ 2ನೇ ಅತ್ಯುತ್ತಮ ರಾಷ್ಟ್ರೀಯ ವಿದ್ಯುತ್ ಸಂರಕ್ಷಣಾ ಪ್ರಶಸ್ತಿಯನ್ನು ಪಡೆದುಕೊಂಡಿದ್ದು, ಮಾನ್ಯ ವ್ಯವಸ್ಥಾಪಕ ನಿರ್ದೇಶಕ, ಬೆವಿಕಂ ರವರು ಈ ಪ್ರಶಸ್ತಿಯನ್ನು ಇಂಧನ ಸಚಿವಾಲಯ ಭಾರತ ಸರ್ಕಾರದ ವತಿಯಿಂದ ಸ್ವೀಕರಿಸಿರುತ್ತಾರೆ.



ಬೆಸ್ಕಾಂ ಬ್ಲೂಸ್ @ ಹುಬ್ಬಳ್ಳಿಯ ಪಂದ್ಯ–2016





ಬೆವಿಕಂ/ ಕವಿಪ್ರನಿನಿ ಕ್ರಿಕೆಟ್ ತಂಡ– ಕೋಲ್ಕತ್ತಾ ಪ್ರವಾಸದ ಸಮಯ




BLE-T20 ಪಂದ್ಯದ ವಿಜೇತರು–ಬೆವಿಕಂ ತಂಡ–2016



ಬೆವಿಕಂ ಹಣಕಾಸು ನಿರ್ದೇಶಕರಿಗೆ BLE T20 ಕಪ್ ಹಸ್ತಾಂತರ





## ಸಂಪಾದಕ ಮಂಡಳಿ

| | |
|---|---|
| **ಶ್ರೀ ಪಿ. ರಾಜೇಂದ್ರ ಚೋಳನ್,** ವ್ಯವಸ್ಥಾಪಕ ನಿರ್ದೇಶಕರು | **ಅಧ್ಯಕ್ಷರು** |
| **ಶ್ರೀ ಡಾ. ಸಿ.ಆರ್. ಚೇತನ್** ನಿರ್ದೇಶಕರು (ಹಣಕಾಸು) | **ಮುಖ್ಯ ಸಂಪಾದಕರು** |
| **ಶ್ರೀ ಕೆ. ಸಿದ್ದರಾಜು,** ನಿರ್ದೇಶಕರು (ತಾಂತ್ರಿಕ) | **ಮುಖ್ಯ ಸಂಪಾದಕರು** |
| **ಶ್ರೀಮತಿ. ಎನ್. ಜಯಂತಿ,** ಪ್ರಧಾನ ವ್ಯವಸ್ಥಾಪಕರು(ಗ್ರಾ.ಸಂ) | **ಸಂಪಾದಕರು** |
| **ಶ್ರೀಮತಿ ಗೀತಾ ಚೌಹ್ಹಾಣ್,** ಸಾರ್ವಜನಿಕ ಸಂಪರ್ಕ ಅಧಿಕಾರಿ | **ಸಂಚಾಲಕರು** |
| **ಶ್ರೀ ಎಸ್.ಕೆ. ನಾಗರಾಜ್,** ನಿಗಮ ವ್ಯವಹಾರ (ಹಿರಿಯ ಸಹಾಯಕ) | **ಉಪ ಸಂಚಾಲಕರು** |
| **ಶ್ರೀ ಆರ್.ಎಚ್. ಲಕ್ಷ್ಮೀಪತಿ,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ | **ಸದಸ್ಯರು** |
| **ಶ್ರೀ ಎನ್. ಪ್ರಕಾಶ್ ಕುಮಾರ್,** ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರುಗಳ ಸಂಘ | **ಸದಸ್ಯರು** |
| **ಶ್ರೀ ರಾಮಚಂದ್ರ ರೆಡ್ಡಿ,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ | **ಸದಸ್ಯರು** |
| **ಶ್ರೀ ಎಚ್.ಆರ್. ರಾಜ್‌ಕುಮಾರ್,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಪ.ಜಾತಿ ಮತ್ತು ಪ.ಪಂಗಡ ಕ್ಷೇಮಾಭಿವೃದ್ಧಿ ಸಂಘ | **ಸದಸ್ಯರು** |
| **ಶ್ರೀ ಎಂ. ರವೀಂದ್ರ,** ಕವಿಪ್ರನಿನಿ/ಎಸ್ಕಾಂಗಳ ಪ.ಜಾತಿ ಮತ್ತು ವರ್ಗದವರ ಅಧಿಕಾರಿಗಳ ಸಂಘ | **ಸದಸ್ಯರು** |
| **ಶ್ರೀ ಕುಮಾರ್ ಮುದ್ದವ್ವನವರ್,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೊಮಾ ಇ. ಸಂಘ | **ಸದಸ್ಯರು** |


## ಮನವಿ

**ಬೆಸ್ಕಾಂ ಸ್ನೇಹಿ** ಗೃಹಪತ್ರಿಕೆಯಲ್ಲಿ ಪ್ರಕಟಣೆಗಾಗಿ ನಿಮ್ಮ ಅಭಿಪ್ರಾಯ, ಸಲಹೆ, ಲೇಖನ, ಕಛೇರಿಯಲ್ಲಿ ಏರ್ಪಡಿಸಿದ ಕಾರ್ಯಕ್ರಮ, ಸಮಾರಂಭಗಳ ಬಗ್ಗೆ ವರದಿಗಳು, ಅಧಿಕಾರಿ/ಸಿಬ್ಬಂದಿ ವರ್ಗದವರ ಸಾಧನೆಗಳ ಬಗ್ಗೆ ಮಾಹಿತಿಗಳನ್ನು ಕಳುಹಿಸಬೇಕಾದ ವಿಳಾಸ:


**ಸಾರ್ವಜನಿಕ ಸಂಪರ್ಕಾಧಿಕಾರಿ, ನಿಗಮ ಕಾರ್ಯಾಲಯ, ನೆಲಮಹಡಿ, ಬಿ.ವಿ.ಕಂಪನಿ, ಕೆ.ಆರ್. ವೃತ್ತ, ಬೆಂಗಳೂರು-560 001.**

ಇಮೇಲ್ ವಿಳಾಸ: **bescommagazine@gmail.com**


**ವಿದ್ಯುತ್ ಸಂಬಂಧಿತ ಯಾವುದೇ ಸಹಾಯಕ್ಕಾಗಿ 24 ಗಂಟೆಗಳ ಸಹಾಯವಾಣಿ: 1912**

**ಸಂದೇಶ ಕಳುಹಿಸಿ: 58888 ವೆಬ್‌ಸೈಟ್: www.bescom.org**


Printed at Shubhodaya Printers, Mob: 99452 77806